ಮೂಲ ದಾವಾ ನಂ. 87/2018

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 08-08-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಮ್. ಎಸ್. ಬಿ. ವಕೀಲರಿಂದಃ**

ವಾದಿ ನನ್ನ ತಾಯಿ. ಮಂಜು ಕೆಲ್ಸಿ ಎಂದರೆ ನನ್ನ ತಂದೆ. ಈಗ ಇಬ್ಬರೂ ಮೃತಪಟ್ಟಿರುತ್ತಾರೆ. ನನ್ನ ತಂದೆ ನನ್ನ ತಾಯಿಗಿಂತ ಮೊದಲೇ ಮೃತಪಟ್ಟಿರುತ್ತಾರೆ. ನನ್ನ ತಂದೆಗೆ ಐದು ಜನ ಮಕ್ಕಳು, ಮೂರು ಗಂಡು , ಇಬ್ಬರು ಹೆಣ್ಣು ಮಕ್ಕಳು. ಪ್ರೇಮಾ, ಚಂದ್ರಕಲಾ, ಗಣೇಶ, ಪ್ರಕಾಶ, ಪ್ರಶಾಂತ ನನ್ನ ತಂದೆಯ ಮಕ್ಕಳಾಗಿರುತ್ತಾರೆ. ಗಂಡು ಮಕ್ಕಳಲ್ಲಿ ಹಿರಿಯ ಮಗ ಗಣೇಶ ಆಗಿರುತ್ತಾರೆ. ನನ್ನ ತಾಯಿ ಮೃತಪಟ್ಟ ನಂತರ ವಾರಿಸಾ ಬದಲಾವಣೆ ಆಗಿರುತ್ತದೆ. ನಮ್ಮ ಕುಟುಂಬದಲ್ಲಿ ಅವಿಭಕ್ತ ಕುಟುಂಬದ ಮ್ಯಾನೇಜರ್ ಇರುವುದಿಲ್ಲ, ಎಲ್ಲರೂ ಸಮಾನರಾಗಿರುತ್ತಾರೆ. ನನಗೆ ಸೇರಿದ ಸ್ವಯಾರ್ಜಿತ ಆಸ್ತಿಯಲ್ಲಿ ನನ್ನ ಹೆಸರು ಅವಿಭಕ್ತ ಕುಟುಂಬದ ಮ್ಯಾನೇಜರ್ ಎಂದು ದಾಖಲಾಗಿರುತ್ತದೆ. ತಂದೆಯ ಸ್ವಯಾರ್ಜಿತ ಆಸ್ತಿಗೆ ನಾವು ಸಮಾಯಿಕ ಹಕ್ಕುದಾರಾಗಿರುತ್ತೇವೆ. ಅದು ವೆಂಕಟಾಪುರ ಗ್ರಾಮದ ಸರ್ವೆ ನಂ. 32 ಅ 1 ಅ 2 ಆಗಿರುತ್ತದೆ. ನಾನು ಅವಿಭಕ್ತ ಕುಟುಂಬದ ಮ್ಯಾನೇಜರ್ ಆಗಿದ್ದೆ ಎನ್ನುವ ಕುರಿತು ಯಾವದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ವಾರಿಸಾ ದಾಖಲೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಅ.ಕು.ಮೆ ನಾತೆಯಿಂದ ಮ್ಯಾನೇಜರ್ ಅಲ್ಲ ಮತ್ತು ನನ್ನ ಸಹೋದರ ಸಹೋದರಿಯರಾದ ಎಲ್ಲರನ್ನೂ ಈ ದಾವೆಗೆ ಸೇರಿಸಬೇಕಾಗಿತ್ತು ಎಂದರೆ ಸರಿಯಲ್ಲ. ನಾನು ಸ್ವಂತ ಜೆರಾಕ್ಸ ಅಂಗಡಿಯನ್ನು ಹೊಂದಿರುತ್ತೇನೆ. ದಾವಾ ಪತ್ರಕ್ಕೆ ನನ್ನ ತಾಯಿ ಮಾಹಿತಿ ಕೊಟ್ಟಿರುತ್ತಾರೆ. ಅದೇ ಮಾಹಿತಿಯ ಆಧಾರದ ಮೇಲೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ತಾಯಿಯಿಂದ ನನಗೆ ಮಾಹಿತಿ ಬಂದಿರುತ್ತದೆ ಎಂದು ನುಡಿಯುುತ್ತಾರೆ. ಈ ವಿಚಾವನ್ನು ನನ್ನ ಮುಖ್ಯ ವಿಚಾರಣೆಯ ಅಫಿಡಾವಿಟ್ ನಲ್ಲಿ ಬರೆದಿರುತ್ತೇನೆ.

ನನ್ನ ಕುಟುಂಬದ ಮೂಲ ಪುರುಷ ಎಂದರೆ ಬಾಲ ಯಾನೆ ಗಣಪಯ್ಯ ಕೆಲ್ಸಿ ಎಂದರೆ ಸರಿ. ದವಾ ಆಸ್ತಿಗಳಲ್ಲೆವೂ ಬಾಲ ಯಾನೆ ಗಣಪಯ್ಯ ಕೆಲ್ಸಿ ರವರಿಗೆ ರೈತನಾತೆಯಿಂದ ಬಂದಿದ್ದು ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿ. ಅವರಿಗೆ ನಾರಾಯಣ, ನಾಗಪ್ಪ ಮತ್ತು ಶಿವರಾಮ ಎನ್ನುವ ಮೂರು ಜನ ಗಂಡು ಮಕ್ಕಳಿದ್ದು ಅವರು ಈಗ ಮೃತಪಟ್ಟಿರುತ್ತಾರೆ ಎಂದರೆ ಸರಿ. ಬಾಲ ಯಾನೆ ಗಣಪಯ್ಯ ಕೆಲ್ಸಿ ಮೃತಪಟ್ಟ ನಂತರ ಅವರ ಎಲ್ಲಾ ಆಸ್ತಿಗಳನ್ನು ನಾರಾಯಣ, ನಾಗಪ್ಪ ಮತ್ತು ಶಿವರಾಮ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಆ ರೀತಿ ವಿಭಾಗ ಮಾಡಿಕೊಂಡ ನಂತರ ಅವರವರ ಹಿಸ್ಸೆಗೆ ಬಂದ ಆಸ್ತಿಗಳನ್ನು ಅವರವರು ಪ್ರತ್ಯೇಕ ಸ್ವಾದೀನತೆಯನ್ನು ಹೊಂದಿ ವಹಿವಾಟು ಮಾಡಿಕೊಂಡು ಬಂದಿದ್ದಾರೆ ಎಂದರೆ ಸರಿ. ಅವರವರ ಹಿಸ್ಸೆಗೆ ಬಂದ ಆಸ್ತಿಗೆ ಬಂದ ಉತ್ಪನ್ನವನ್ನು ಅವರವರೇ ಪಡೆದುಕೊಂಡು ಬಂದಿದ್ದಾರೆ ಎಂದರೆ ಸರಿ.

ಈ ದಾವೆಯ ದಾವಾ ಆಸ್ತಿಗಳು ನಾಗಪ್ಪ ರವರ ಕವಲಿಗೆ ಬಂದಂತಹ ಆಸ್ತಿಗಳು ಎಂದರೆ ಸರಿ. ನಾಗಪ್ಪನಿಗೆ ಗಂಗೆ, ದೇವಿ ಮತ್ತು ಶಾರದಾ ಎನ್ನುವ ಮೂರು ಜನ ಹೆಣ್ಣು ಮಕ್ಕಳಿದ್ದರು ಮತ್ತು ಅವರು ಈಗ ಮೃತಪಟ್ಟಿರುತ್ತಾರೆ ಎಂದರೆ ಸರಿ. ನಾಗಪ್ಪ ಜೀವಂತ ಇದ್ದಾಗಲೇ ಗಂಗೆ, ದೇವಿ ಮತ್ತು ಶಾರದಾರವರ ಮದುವೆಯಾಗಿತ್ತು ಎಂದರೆ ಸರಿ. ಗಂಗೆಗೆ ರಾಮ ಎನ್ನುವ ಗಂಡ ಮತ್ತು 5 ನೇ ಪ್ರತಿವಾದಿ ಮಗನಿರುತ್ತಾನೆ ಎಂದರೆ ಸರಿ. ದೇವಿಗೆ ನಾರಾಯಣ ಎನ್ನುವ ಗಂಡ ಮತ್ತು 1 ರಿಂದ 4 ನೇ ಪ್ರತಿವಾದಿಯರು ಮಕ್ಕಳಾಗಿರುತ್ತಾರೆ ಎಂದರೆ ಸರಿ. ಶಾರದಾ ಎಂದರೆ ನನ್ನ ತಾಯಿ.

ಮೂಲತಃ ನಾರಾಯಣ ಮತ್ತು ಶಿವರಾಮನ ಕವರಿಗೆ ಯಾವ ಆಸ್ತಿಗಳು ಹೋಗಿರುತ್ತವೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾಗಪ್ಪನ ಕವರಿಗೆ ಬಂದಂತಹ ಎಲ್ಲಾ ಆಸ್ತಿಗಳು ರೈತಾಪಿ ಜಮೀನಾಗಿರುತ್ತವೆ. ನಾರಾಯಣ, ನಾಗಪ್ಪ ಮತ್ತು ಶಿವರಾಮ ರವರ ಮಧ್ಯೆ ವಾಂಟಣಿಯಾಗುವ ಸಮಯದಲ್ಲಿ ನಾಗಪ್ಪನ ಹಿಸ್ಸೆಗೆ ಬಂದಂತಹ ಆಸ್ತಿಗಳು ಅಂದರೆ ದಾವಾ ಆಸ್ತಿಗಳು ಅಸ್ತಿತ್ವದಲ್ಲಿ ಇತ್ತಾ ಎಂದರೆ ಸಾಕ್ಷಿ ಇತ್ತು ಎಂದು ನುಡಿಯುತ್ತಾರೆ. ಬಾಲಯ್ಯನಿಂದ ನಾಗಪ್ಪನಿಗೆ ಹಿಸ್ತೆ ಮೂಲಕ ಬಂದಂತಹ ಆಸ್ತಿಗಳು ಆದ್ದರಿಂದ ಅವು ನಾಗಪ್ಪನ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿ. ಸಾಕ್ಷಿ ಮುಂದುವರಿದು ಅವು ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಬಾಲ ಗಣಪಯ್ಯ ಕೆಲ್ಸಿಯ ಸ್ವಯಾರ್ಜಿತ ಆಸ್ತಿಗಳು ಹೇಗೆ ನಾಗಪ್ಪನ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂದರೆ ಸಾಕ್ಷಿ ಅದು ತಂದೆಯಿಂದ ಬಂದ ಆಸ್ತಿಯಾಗಿದ್ದು ಅದು ನಾಗಪ್ಪನ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ.

ನಾಗಪ್ಪ ತಂದೆ ಬಾಲ ಕೆಲ್ಸಿ ರವರ ಹೆಸರಿನಲ್ಲಿ ಕೆಲವು ಆಸ್ತಿಗಳನ್ನು ಖರೀದಿ ಮಾಡಿದ್ದು ಎಂದು ವಾದ ಪತ್ರದಲ್ಲಿ ನಮೂದಿಸಿದ್ದು ಅವು ಯಾವ ಆಸ್ತಿಗಳು ಮತ್ತು ಯಾರಿಂದ ಖರೀದಿ ಮಾಡಿದ್ದು ಎಂದು ಹೇಳಲು ಆಗುತ್ತದಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಗಳು ರೈತಾಪಿ ಹಕ್ಕಿನ ಆಸ್ತಿಗಳಾಗಿದ್ದು ಅದರ ಮೂಲ ಒಡೆಯ ಯಾರು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಕುರಿತು ಭೂನ್ಯಾಯ ಮಂಡಳಿಗೆ ನಾಗಪ್ಪನೇ ಅರ್ಜಿಯನ್ನು ಸಲ್ಲಿಸಿದ್ದ ಅಂದರೆ ಸರಿ. ಆ ನಂತರ ಭೂನ್ಯಾಯ ಮಂಡಳಿಯವರು ನಾಗಪ್ಪನ ಹೆಸರಿಗೆ ಸದ್ರಿ ಆಸ್ತಿಗಳನ್ನು ಮಂಜೂರು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾಗಪ್ಪನ ಹೆಸರಿಗೆ ಪಟ್ಟಾ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಅರ್ಜಿಯನ್ನು ತನ್ನ ವೈಯಕ್ತಿಕ ನಾತೆಯಿಂದ ನಾಗಪ್ಪ ತುಂಬಿದ್ದ ಎಂದರೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.